<u>ಸಾಕ್ಷಿಗೆ ದಿನಾಂಕ 01-04-2024 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

ಹೆಚ್ ಎಂ ಯೋಗೇಶ್‌ಬಿನ್ P.W.: 1
ಹೆಚ್ ಎಂ ಪಾಲಾಕ್ಷಯ್ಯ

<u>ಮುಂದುವರೆದ ಪಾಟೀ ಸವಾಲು. ಆರೋಪಿ ಪರ ಶ್ರೀ ವಿ ಎನ್ ವಕೀಲರಿಂದಃ-</u>

ದಿಃ 08-01-2000 ನೇ ಸಾಲಿನಲ್ಲಿ ಶಿಕ್ಷಕರಾಗಿ ನೇಮಕಾತಿ ಹೊಂದಿರುತ್ತೇನೆ. ಆರೋಪಿಯು ನನ್ನಿಂದ ಪಡೆದಂತಹ ಸಾಲದ ಹಣವನ್ನು 6 ತಿಂಗಳಲ್ಲಿ ಮರುಪಾವತಿ ಮಾಡುವುದಾಗಿ ನನಗೆ ತಿಳಿಸಿದ್ದರು. ದಿಃ 13-07-2020 ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ನಾನು ಆರೋಪಿಗೆ ಹಣವನ್ನು ಕೊಟ್ಟಿರುತ್ತೇನೆ. ನನ್ನ ಸಂಬಳಕ್ಕೆ ತಕ್ಕಂತೆ ಆದಾಯ ತೆರಿಗೆಯನ್ನು ಪಾವತಿಸಲಾಗುತ್ತದೆ. ಆರೋಪಿಗೆ ಸಾಲವನ್ನು ಕೊಟ್ಟ ಬಗ್ಗೆ ನಾನು ಆದಾಯ ತೆರಿಗೆಯಲ್ಲಿ ತೋರಿಸಿರುವುದಿಲ್ಲ. ಈ ಬಗ್ಗೆ ನಾನು ಆದಾಯ ತೆರಿಗೆಯಲ್ಲಿ ತೋರಿಸಲು ಯಾವುದೇ ತೊಂದರೆ ಇರಲಿಲ್ಲ.

ನಿಪಿ-1ರ ಚೆಕ್ಕು ಆರೋಪಿಯ ಖಾತೆಗೆ ಸಂಬಂಧಪಡದ ಚೆಕ್ಕಾಗಿದ್ದರೂ, ನಾನು ನಿಪಿ-1ರ ಯಾರದೋಚೆಕ್ಕಿನಲ್ಲಿ ಆರೋಪಿಯ ಸಹಿಯನ್ನು ಮಾಡಿ, ಆರೋಪಿಯ ವಿರುದ್ಧ ಈ ಸುಳ್ಳು ಪಿರ್ಯಾದನ್ನು ದಾಖಲುಪಡಿಸಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ